ತಮ್ಮ ಸಲಹೆ ಏನಾದರೂ ಇದ್ದರೆ ಕೊಡಿ, ಆ ಸಲಹೆಗಳನ್ನು ಎಷ್ಟರಮಟ್ಟಿಗೆ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ವಿಚಾರ ಮಾಡೋಣ, ಮತ್ತೆ ಕೇಂದ್ರ ಸರ್ಕಾರಕ್ಕೆ ಈ ಯೋಜನೆಯನ್ನು ಯಾವರೀತಿ ತಯಾರು ಮಾಡಿದ್ದೇವೆ ಎಂದು ಹೇಳಿ, ಪಬ್ಲಿಕ್ ಸೆಕ್ಟಾರ್ ಬ್ಯಾಂಕುಗಳಿಗೆ ಏನು ಸಹಾಯ ಮಾಡಿದ್ದೀರಿ ಅದೇರೀತಿ ಸಹಾಯವನ್ನು ಸಹಕಾರ ಸಂಘಗಳ ಸಾಲಕ್ಕೂ ಕೊಡಬೇಕೆಂದು ಕೇಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:-- ಇದು ರೈತರ ವಿರೋಧಿ ಸರ್ಕಾರ. ರೈತನ ಬಗ್ಗೆ ನಿಮಗೆ ಕಳಕಳಿ ಇಲ್ಲ. ಎಲ್ಲದ್ದಕ್ಕೂ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತೀರಿ. ಇದರಲ್ಲಿ ನಿಮ್ಮ ಜವಾಬ್ದಾರಿಯೂ ಇದೆ. ತಮ್ಮ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗುತ್ತೇವೆ.

(ಬಿ.ಜೆ.ಪಿ.ಯ ಸದಸ್ಯರುಗಳು ಸದನದಿಂದ ನಿರ್ಗಮಿಸಿದರು)

೧.೩೧ ಪಿ.ಎಂ.

ANNOUNCEMENT

MR. SPEAKER.-- Under Rule 9 of the Rules of Procedure and Conduct of Business in the Legislative Assembly I nominate the following members on the panel of Chairmen for the current Session.

1. Smt. Chandraprabha Urs
2. Smt. Renuka Rajendran
3. Sri G. Rajugowda
4. Sri Idinabba
5. Sri S. H. Koujalgi
6. Sri Basavaraj Patil Atoor

ಗಮನ ಸೆಳೆಯುವ ಸೂಚನೆಗಳು

ಮಂಡ್ಯ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ

ಶ್ರೀ ಎಂ. ಎಸ್. ಆತ್ಮಾನಂದ್.-- ಮಾನ್ಯ ಅಧ್ಯಕ್ಷರೇ ಮಂಡ್ಯ ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು).— ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರಕ್ಕೆ ಹಾಲಿ ನೀರು ಸರಬರಾಜು ಯೋಜನೆ ೧೯೭೧ ರಲ್ಲಿ ೧೧೫ ಲಕ್ಷ ರೂಪಾಯಿ ಅಂದಾಜನ್ನು ಸರ್ಕಾರ ಮಂಜೂರು ಮಾಡಿತು. ಯೋಜನೆಯನ್ನು ಕಾರ್ಯಗತಗೊಳಿಸಲು ಜಲಮಂಡಲಿಗೆ ೧೯೭೫ರಲ್ಲಿ ವರ್ಗಾಯಿಸಲಾಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಿ ೧೯೮೫ರಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇದರ ಮೂಲ ಸ್ಥಾವರ ಕಾವೇರಿ ನದಿಯಾಗಿದೆ.

ಹಾಲಿ ಯೋಜನೆಯನ್ನು ೨೦೦೧ನೇ ಇಸವಿಯಲ್ಲಿ ಊಹಿಸಲಾದ ೧,೧೫,೦೦೦ ಜನಸಂಖ್ಯೆಗೆ ದಿನಂಪ್ರತಿ ತಲಾ ೧೧೨ ಲೀಟರ್ (೨೫ ಗ್ಯಾಲನ್)ನೀರನ್ನು ಸರಬರಾಜು ಮಾಡಲು ಯೋಜಿಸಲಾಗಿತ್ತು. ಆದರೆ ಈಗಾಗಲೇ ಮಂಡ್ಯ ನಗರದ ಜನಸಂಖ್ಯೆಯು ಸುಮಾರು ೧,೨೫,೦೦೦ಕ್ಕಿಂತಲೂ ಹೆಚ್ಚಾಗಿರುವುದು. ಇದಲ್ಲದೆ ಪ್ರತಿ ದಿನವೂ ವಿದ್ಯುತ್ ಕೊರತೆಯಿಂದಾಗಿ ೧೮ ರಿಂದ ೨೦ ಗಂಟೆಗಳ ಕಾಲ ಮಾತ್ರ ಪಂಪುಗಳನ್ನು ಚಾಲನೆ ಮಾಡಲು ಸಾಧ್ಯವಾಗುತ್ತಿದೆ. ಹೀಗಾಗಿ ಹಾಲಿ ದಿನಂಪ್ರತಿ

೨ ದಶಲಕ್ಷ ಗ್ಯಾಲನ್ (೯.೦೮ ದಶಲಕ್ಷ ಲೀಟರ್) ನೀರನ್ನು ಶುದ್ಧಪಡಿಸಿ ಸರಬರಾಜು ಮಾಡಲಾಗುತ್ತಿದೆ. ಇದರಿಂದಾಗಿ ಹಾಲಿ ದಿನಂಪ್ರತಿ ತಲಾ ೭೨ ಲೀಟರ್ (೧೬ ಗ್ಯಾಲನ್) ಪ್ರಮಾಣದಲ್ಲಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇದಲ್ಲದೆ ಹಾಲಿ ೭೬ ಕೊಳವೆ ಬಾವಿಗಳಿದ್ದು ಅವುಗಳಲ್ಲಿ ೫೯ ಬಾವಿಗಳಿಗೆ ಕೈಪಂಪನ್ನು ೧೭ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪುಗಳನ್ನು ಅಳವಡಿಸಲಾಗಿದೆ. ಮಂಡ್ಯ ನಗರವು ಶೀಘ್ರಗತಿಯಲ್ಲಿ ಬೆಳೆಯುತ್ತಿದ್ದು ಹೊಸ ಹೊಸ ಬಡಾವಣೆಗಳು ನಿರ್ಮಾಣವಾಗುತ್ತಿವೆ. ಈ ಹೊಸ ಬಡಾವಣೆಗಳಿಗೆ ಕಾವೇರಿ ನದಿಯಿಂದ ನೀರನ್ನು ಈಗಿನ ಪರಿಸ್ಥಿತಿಯಲ್ಲಿ ಸರಬರಾಜು ಮಾಡಲು ಸಾಕಾಗುತ್ತಿಲ್ಲ. ಈ ಬಡಾವಣೆಗಳಿಗೆ ಕೊಳವೆ ಬಾವಿಗಳಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಆದ್ದರಿಂದ ಕಾವೇರಿ ನದಿಯಿಂದ ನೀರನ್ನು ಹೊಸ ಬಡಾವಣೆಗಳಿಗೆ ಸರಬರಾಜು ಮಾಡಲು ಹಾಗೂ ೨೦೧೧ರಲ್ಲಿ ಇರಬಹುದಾದ ಜನಸಂಖ್ಯೆಗೆ ದಿನಂಪ್ರತಿ ತಲಾ ೧೩೫ ಲೀಟರ್ (೩೦ ಗ್ಯಾಲನ್)ನಂತೆ ನೀರನ್ನು ಸರಬರಾಜು ಮಾಡಲು ೨ನೇ ಹಂತದ ಯೋಜನೆಯನ್ನು ಕೈಗೊಳ್ಳಬೇಕಾಗಿರುತ್ತದೆ. ಈ ಯೋಜನೆಯ ಅಂದಾಜು ಸಂಭಾರು ೮.೦೦ ಕೋಟಿ ರೂಪಾಯಿಗಳು ಆಗುವುದು. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಹಾಗೂ ಮಂಡ್ಯ ನಗರಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಈ ಯೋಜನೆಯನ್ನು ಪರಿಶೀಲಿಸುತ್ತದೆ.

ಶ್ರೀ ಎಂ. ಎಸ್. ಆತ್ಮಾನಂದ್.— ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿರುವಂತೆ ಮಂಡ್ಯ ನೀರುಸರಬರಾಜು ಯೋಜನೆಗೆ ವಿದ್ಯುಚ್ಛಕ್ತಿಯ ಅಭಾವವೇ ಒಹಳ ಮುಖ್ಯ ಕಾರಣವಾಗಿದೆ ಎಂದು ಹೇಳಿದ್ದಾರೆ. ಇಲ್ಲಿಗೆ ಮೂರು ಕಡೆಯಿಂದ ವಿದ್ಯುಚ್ಛಕ್ತಿ ಬರಬೇಕಾಗಿದೆ. ಪ್ರತಿ ದಿವಸ ವಿದ್ಯುಚ್ಛಕ್ತಿ ಹೋಗುತ್ತಿದೆ. ಇದರಿಂದಾಗಿ ನೀರು ಸರಬರಾಜಾಗಬೇಕಾದರೆ ೨–೩ ದಿವಸಗಳೇ ಆಗಬೇಕಾಗುತ್ತದೆ. ಆದ್ದರಿಂದ ಈ ಒಂದು ಕೊರತೆಯನ್ನು ನಿವಾರಿಸಲು ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಂಬುದು ಒಂದು. ಎರಡನೆಯದಾಗಿ ಇಲ್ಲಿ ಇವರೇ ಒಪ್ಪಿಕೊಂಡಿರುವಂತೆ ಹೊಸ ಬಡಾವಣೆಗಳು ಮಂಡ್ಯದಲ್ಲಿ ಹೆಚ್ಚುತ್ತಿರುವುದರಿಂದ ಜನಸಂಖ್ಯೆಯೂ ಕೂಡ ಬಹಳವಾಗಿ ಹೆಚ್ಚುತ್ತಿದೆ. ಇದರಿಂದಾಗಿ ಕಾವೇರಿ ಎರಡನೆಯ ಯೋಜನೆಯನ್ನು ಮಂಡ್ಯಕ್ಕೆ ತರಬೇಕು ಎನ್ನುವುದನ್ನು ಹೇಳುವಾಗ ಅದರ ಉಪಯುಕ್ತತೆಯ ಬಗ್ಗೆ ನೀರುಸರಬರಾಜು ಮಂಡಲಿಯವರು ಗಮನಹರಿಸಿ ಈ ಯೋಜನೆಯನ್ನು ಕೈಗೊಳ್ಳಬೇಕೆಂದು ಹೇಳುತ್ತಾ ಪ್ರಸಕ್ತ ವರ್ಷದಲ್ಲಿ ಅನೇಕ ನಗರ ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಂಡು ಕಾರ್ಯಗತ ಮಾಡಬೇಕೆಂದು ನಾನಾದರೂ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ ಮಂಡ್ಯ ನಗರಕ್ಕೆ ಖಾಯಂ ನೀರು ಸರಬರಾಜು ಮಾಡಬೇಕಾದಲ್ಲಿ ಎರಡನೆಯ ಹಂತವನ್ನು ಕೈಗೊಳ್ಳಬೇಕಾಗಿದೆ ಈ ಎರಡನೆಯ ಹಂತವನ್ನು ತೆಗೆದುಕೊಳ್ಳಬೇಕಾದರೆ ಹಣ ಬೇಕಾಗುತ್ತದೆ. ಹಣದ ಕೊರತೆಯನ್ನು ಗಮನಿಸಿ ಎರಡನೆಯ ಹಂತ ತಕ್ಷಣದಲ್ಲಿಯೇ ಬರುತ್ತದೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಈಗ ಮಂಡ್ಯದಲ್ಲಿ ನೀರಿನ ಸಮಸ್ಯೆ ಉದ್ಭವವಾಗಿರುವುದರಿಂದ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡುವ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮಂಡ್ಯ ಜನತೆಗೆ ನೀರಿನ ತೊಂದರೆ ಇಲ್ಲದಂತೆ ನೋಡಿಕೊಳ್ಳುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ವಿದ್ಯುಚ್ಛಕ್ತಿ ಅಭಾವವನ್ನು ನೀಗಿಸಲು ಏನಾ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಅದರ ಬಗ್ಗೆ ವಿದ್ಯುಚ್ಛಕ್ತಿ ಅಧಿಕಾರಿಗಳ ಜೊತೆ ಮಾತನಾಡಿ ಎಷ್ಟರಮಟ್ಟಿಗೆ ಈ ಕೊರತೆ ತಗ್ಗಿಸಲು ಸಾಧ್ಯವಿದೆ ಎಂದು ವಿಚಾರ ಮಾಡುತ್ತೇನೆ. ಈ ಬಗ್ಗೆ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಎಂ ಎಸ್. ಆತ್ಮಾನಂದ.— ನೀರಿನ ಅಭಾವ ನೀಗಿಸಲು ಸರ್ಕಾರ ೫೦ ಕೊಳವೆ ಬಾವಿಗಳಾನ್ನಾದರೂ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆಷ್ಟು ಸಂಖ್ಯೆಯಲ್ಲಿ ಕೊಡಲಿಕ್ಕೆ ಸಾಧ್ಯವಿಲ್ಲದಿದ್ದರೂ ಸ್ವಲ್ಪ ಮಟ್ಟಿಗಾದರೂ ಕೊಳವೆ ಬಾವಿಗಳನ್ನು ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.— ಈಗ ಏನು ಪೈಪ್‌ಗಳನ್ನು ಉಪಯೋಗಿಸಿದ್ದಾರೆ ಆ ಪೈಪುಗಳು ಆಗಾಗ್ಗೆ ಒಡೆಯುತ್ತಿರುತ್ತವೆ. ಅವರ ಗುಣಮಟ್ಟ ಚೆನ್ನಾಗಿಲ್ಲ. ಆದರ ಬಗ್ಗೆ ಸರ್ಕಾರ ಪರಿಶೀಲಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರನ್ನು ಈ ವಿಚಾರವಾಗಿ ದೀರ್ಘವಾಗಿ ಚರ್ಚೆ ಮಾಡಲು ಆಹ್ವಾನಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.— ಸಾಮಾನ್ಯವಾಗಿ ಯೋಜನೆ ಹಾಕಿದ ೫–೧೦ ವರ್ಷಗಳಲ್ಲಿ ನೀರು ಸಾಕಾಗುವುದಿಲ್ಲವೆಂದು ಕೇಳಿಬರುತ್ತಿದೆ. ಆದ್ದರಿಂದ ೨೫—೩೦ ವರ್ಷಗಳ ದೂರದೃಷ್ಟಿ ಇಟ್ಟುಕೊಂಡು ಯೋಜನೆಯನ್ನು ಕೈಗೊಳ್ಳುತ್ತೀರಾ ? ೫–೧೦ ವರ್ಷಗಳಿಗೆಲ್ಲ ನೀರು ಕಡಿಮೆಯಾದರೆ ದೂರದೃಷ್ಟಿಯ ಕೊರತೆ ಅಲ್ಲವೇ ? ಇದರಿಂದ ಸರ್ಕಾರದ ಖಜಾನೆಗೆ ಹೆಚ್ಚು ಖರ್ಚು ತಗಲುವುದಿಲ್ಲವೇ ? ಮುಂದಾದರೂ ಪಟ್ಟಣ ಪ್ರದೇಶಗಳಿಗೆ ದೂರದೃಷ್ಟಿಯನ್ನು ಇಟ್ಟುಕೊಂಡು ಯೋಜನೆ ಹಾಕುವುದಕ್ಕೆ ಸಾಧ್ಯವೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಸದಸ್ಯರ ಸಲಹೆ ಉತ್ತಮವಾಗಿದೆ. ಅದನ್ನು ಹೇಗೆ ಜಾರಿಗೆ ತರಬೇಕೆಂಬುದು ಸದಸ್ಯರಿಗೆ ಗೊತ್ತಿದೆ. ಈಗ ನಮಗೆ ಆರ್ಥಿಕ ಕೊರತೆ ಇರುವುದರಿಂದ ಸದನದಲ್ಲಿ ಆ ಬಗ್ಗೆ ಆಶ್ವಾಸನೆ ಕೊಡುವುದಕ್ಕೆ ನಾನು ಇಚ್ಛಿಸುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.— ಮೈಸೂರು ನಗರಕ್ಕೆ ತಾರತಮ್ಯ ಮಾಡಿದ್ದೀರಿ.

ಚೇರ್ಮನ್.— ಪ್ರಶ್ನೆ ಕೇಳಿದ ಸದಸ್ಯರು ಮಾತ್ರ ಮುರು ಪ್ರಶ್ನೆ ಕೇಳಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಇದು ಮಂಡ್ಯ ನಗರಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಅವರ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ.—(ಮಾನ್ಯ ಸದಸ್ಯರು ಹಾಜರಿಲ್ಲ)

ಶ್ರೀ ಡಿ. ಬಿ. ಚಂದ್ರೇಗೌಡ —ನಾನು ಸಿಖಿಳರ ಕೆಲಸಕ್ಕೆ ಒಂದು ಸೂಚನೆ ಕಳಿಸಿದ್ದೇನೆ. ಅದರ ಆರ್ಜಿನ್ಸ್‌ಯನ್ನು ಸರ್ಕಾರಕ್ಕೆ ಹೇಳುವುದಕ್ಕೆ ತಾವು ಅನುಮತಿ ಕೊಟ್ಟರೆ ಹೇಳಿಬಿಡುತ್ತೇನೆ. ಏಕೆಂದರೆ ಬಸವಲಿಂಗಪ್ಪನವರು ಈಗ ಇಲ್ಲಿದ್ದಾರೆ.

ಚೇರ್ಮನ್.—ಅವರು ಇಲ್ಲೇ ಇರುತ್ತಾರೆ, ಆಮೇಲೆ ಹೇಳಿ.

ನಿಯಮ ೩೩೪ ರ ಮೇಲಿನ ಚರ್ಚೆ

ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವುದು

ಶ್ರೀ ಬಿ. ಆರ್. ಗುರುದೇವ್ (ಸಕಲೇಶಪುರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಇದರ ಬಗ್ಗೆ ಮಂತ್ರಿಗಳು ಒಂದು ನಿಗದಿತ ವೇಳೆಯನ್ನು ತಿಳಿಸಬೇಕು. ಏಕೆಂದರೆ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಸಣ್ಣ ರೈತರು ಬಹಳ ಕಷ್ಟದಲ್ಲಿದ್ದಾರೆ. ತಾವು ದಯವಾಡಿ ಒಂದು ಟೈಂಬಾಂಡನ್ನು ಗೊತ್ತು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEEZ SAIT (Minister for Revenue).—I wish to make the following statement.

The Government is actively considering the question of regularisation of unauthorised occupation of Government lands. As it is necessary to amend Section 94 of the Karnataka Land Revenue Act, 1964, Government would soon come up with an amendment bill to enable regularisation. It is the desire of the Government to introduce this bill in the ensuing legislative session.